### ಆಪ್ಯ ವಿಶ್ಲೇಷಣೆ

'ಇದು ಎಲ್ಲರೊಳಗೆ ಒಂದಾದವರ ಕಪ್' (ಜು. 18, ವಿಶಾಖ ಎನ್.) ಭಾರತದ ಟಿ20 ವಿಶ್ವಕಪ್ ವಿಜಯದ ಕುರಿತ ಲೇಖನವು ಆತ್ಮೀಯವಾಗಿತ್ತು. ತರಬೇತುದಾರ ಕನ್ನಡಿಗ ರಾಹುಲ್ ದ್ರಾವಿಡ್ ಹಾಗೂ ಪ್ರತಿಯೊಬ್ಬ ಆಟಗಾರನ ಕೊಡುಗೆಯನ್ನೂ, ಪ್ರತೀ ಪಂದ್ಯದ ಚುಟುಕಾದ ವಿವರಣೆಯನ್ನೂ ಬಹಳ ಆಪ್ಯವಾಗಿ ವಿಶ್ಲೇಷಿಸಲಾಗಿತ್ತು. ಈ ಹಿಂದೆ ನಮ್ಮ ತಂಡದ ಗೋಡೆಯಾಗಿ ಹಲವಾರು ಪಂದ್ಯಗಳನ್ನು ಗೆಲ್ಲಿಸಿಕೊಟ್ಟ, ಹಲವಾರು ಪಂದ್ಯಗಳಲ್ಲಿ ನಿಶ್ಚಿತ




ಸೋಲನ್ನು ತಪ್ಪಿಸುತ್ತಿದ್ದ, ಕಿರಿಯರು ವಿಶ್ವಕಪ್ ಗೆಲ್ಲುವಾಗಲೂ ತರಬೇತುದಾರನಾಗಿದ್ದ ದ್ರಾವಿಡ್ ಅವರಿಗೆ ಕರ್ನಾಟಕದ ಕ್ರಿಕೆಟ್ ಮಂಡಳಿ ಕ್ರೀಡಾ ಪ್ರೇಮಿಗಳ ಸಮ್ಮುಖದಲ್ಲಿ ಒಂದು ಸನ್ಮಾನ ಸಮಾರಂಭ ಏರ್ಪಡಿಸೀತೇ?

—ಬಿ.ಎನ್. ಭರತ್, ಬೆಂಗಳೂರು

### ಹದವಾದ ಹಾಸ್ಯದ ಜೊತೆಗೆ ಅರಿವು

'ಮಕ್ಕಳೊಂದಿಗೆ ಮಕ್ಕಳಾಗಿ' (ಜು. 18, ಶ್ರೀರಂಜನಿ ಅಡಿಗ) ಲೇಖನವು ಹದವಾದ ಹಾಸ್ಯದೊಂದಿಗೆ ತಾಂತ್ರಿಕ ಯುಗದ ಒಂದಿಷ್ಟು ಮಾಂತ್ರಿಕ ತಿಳಿವಳಿಕೆಯೂ ಈ ಕಾಲದ ಹೆತ್ತವರಿಗೆ ಅಗತ್ಯವಿದೆ ಎಂಬುದನ್ನು ತಿಳಿಸುವಂತಿತ್ತು. ಹಿಂದಿನ ತಲೆಮಾರು ಕಲಿತ ಉದ್ದುದ್ದನೆಯ ಪದಗಳು ಇನ್ನು ಬಳಕೆಯಾಗದೆ ತುಕ್ಕುಹಿಡಿಯುವ ಸಾಧ್ಯತೆಯೂ ಇದೆ ಎಂಬ ಸರಳ ಸತ್ಯವೂ ಅರಿವಿಗೆ ಬಂತು.

—ಮಹಮ್ಮದ್ ಮೂಡುಬಿದಿರೆ

### ಮಲೆನಾಡಿನಲ್ಲೂ ವಿರಳ

'ಚುರುಕು ಮುಟ್ಟಿಸುವ ಹಾಲುವಾಣ' (ಜು. 11, ವಿನು ಗಂಗೆ) ಲೇಖನ ಚೆನ್ನಾಗಿದೆ. ಮಲೆನಾಡಿನವಳೇ ಆದ ನನಗೆ ಹಾಲುವಾಣ ಬಾಲ್ಯದಿಂದಲೇ ಪರಿಚಿತ. ಇದರಲ್ಲಿ ಕೆಂಪು ಹಾಲುವಾಣ ಹಾಗೂ ಬಿಳಿ ಹಾಲುವಾಣ ಎಂಬ ಎರಡು ಬಗೆಗಳಿದ್ದು, ಬಿಳಿ ಹಾಲುವಾಣ ಶೀತ, ಕೆಮ್ಮು, ಕಫ, ಮೈ ಕೈ ನೋವಿಗೆ ರಾಮಬಾಣದಂತೆ ಕೆಲಸ ಮಾಡುತ್ತದೆ. ಮಳೆಗಾಲದಲ್ಲಂತೂ ನಮ್ಮ ಮನೆಯಲ್ಲಿ ಪ್ರತಿದಿನ ಇದರ ಚಕ್ಕೆಯ ಕಷಾಯ ಇದ್ದೇ ಇರುತ್ತಿತ್ತು. ಇದರ ಬೀಜವನ್ನು ಚೆನ್ನೆಮಣೆ ಆಟಕ್ಕೆ ಬಳಸುತ್ತಿದ್ದೆವು. ಬೀಜ ವಿಷವೆಂದು ಹಿರಿಯರು ಎಚ್ಚರಿಸುತ್ತಿದ್ದರು. ಇಂಥ ಬಹೂಪಯೋಗಿ ಹಾಲುವಾಣ ಮಲೆನಾಡಿನಲ್ಲೂ ನೋಡಸಿಗುವುದು ಅಪರೂಪವಾಗಿದೆ.

—ಜಲಜಾ ಬಿ. ಗೋಪಾಲಕೃಷ್ಣ




### ಭಾರತದ ಛಾಪು ಢಾಳಾಗಲಿ

'ಭುವನದ ಬೆಡಗು' (ಜು. 18, ಪ್ರಮೋದ) ಮುಖಪುಟ ಲೇಖನ, ಒಲಿಂಪಿಕ್ಸ್ ಕುರಿತ ಸವಿಸ್ತಾರ ಮಾಹಿತಿ ಒದಗಿಸಿತು. ಚಿತ್ರಗಳು ಒಲಿಂಪಿಕ್ಸ್‌ನ ವೈಭವವನ್ನು ಪ್ರತಿಬಿಂಬಿಸುವಂತಿದ್ದವು.

'ನಾವೆಲ್ಲ ಒಂದು' ಎನ್ನುವ ಕ್ರೀಡೆಯ ಮುಖ್ಯ ಆಶಯವನ್ನು ಅಡಿಪಾಯ ಮಾಡಿಕೊಂಡಿರುವ ಒಲಿಂಪಿಕ್ಸ್ ಕುರಿತ ಹಲವು ಮಾಹಿತಿಗಳನ್ನು, ಸಂಗತಿಗಳನ್ನು, ಘಟ್ಟಗಳನ್ನು ಲೇಖನ ಒಳಗೊಂಡಿತ್ತು. ಆಸಕ್ತಿದಾಯಕವೂ ಆಗಿತ್ತು. ದೇಶ, ಭಾಷೆಗಳ ಗಡಿಗಳನ್ನು ಮೀರಿ ಸೌಹಾರ್ದದೊಂದಿಗೆ ನಡೆಯುವ, ಕ್ರೀಡಾಪ್ರೇಮಿಗಳಿಗೆ ಹಬ್ಬವೇ ಆಗಿರುವ ಒಲಿಂಪಿಕ್ಸ್‌ನಲ್ಲಿ ಈ ಬಾರಿ ಭಾರತದ ಛಾಪು ಇನ್ನಷ್ಟು ಢಾಳಾಗಲಿ...

—ಶ್ರೀಕರಣ್, ಮೈಸೂರು

### ಕೌತುಕಮಯ ಕಥನ

'ಕೌಬಾಯ್‌ಗಳ 'ಕೌಟೌನ್' ಈಗಿನ ಫೋರ್ಟ್ ವರ್ತ್' (ಜು. 18, ಸರಸ್ವತಿ ಶಂಕರ್) ಸೊಗಸಾದ ಪ್ರವಾಸ ಲೇಖನ. ದೂರದ ಡಲ್ಲಾಸ್‌ನ ಮಾರುದ್ದದ ಕೊಂಬಿನ ಜಾನುವಾರುಗಳ ಹೈನುಗಾರಿಕೆ, ವಾಣಿಜ್ಯ, ಐತಿಹಾಸಿಕ ಮಾಹಿತಿಯ, ವಿಶದ ವಿವರಣೆಯ, ಸಚಿತ್ರ ಲೇಖನವನ್ನು ಮನೆಯ ಹಜಾರದ ಸುಖದ ಓದಿಗೆ ತಂದೊದಗಿಸಿದ 'ಸುಧಾ'ಗೆ ಥ್ಯಾಂಕ್ಸ್! ಕೌಬಾಯ್ ಕೌಟೌನ್ ಅನ್ನೂ, ಅಲ್ಲಿನ ವಸ್ತು ಸಂಗ್ರಹವನ್ನೂ, ಕೌಬಾಯ್ ಕಾಳಗಗಳ ಬೀದಿ ನಾಟಕವನ್ನೂ ಕಣ್ಣಾರೆ ಕಂಡು ಆಸ್ವಾದಿಸುವ ಆಸೆ ಚಿಗುರಿಸಿದವು. ಗತಕಾಲದ ಪಟ್ಟಣದ ಕೌತುಕಮಯ ಕಥನವನ್ನು ತೆರೆದಿಟ್ಟಿತು.

—ಪ್ರೀತಾ ಶರ್ಮಾ, ಬೆಂಗಳೂರು

### ರೋಚಕ ಫೋರ್ಟ್ ವರ್ತ್

ಗೌಳಿಗರ ನೆಲೆವೀಡಾಗಿದ್ದ ಊರು ಆಧುನಿಕ ಕಾಲಕ್ಕೆ ತಕ್ಕಂತೆ ಬದಲಾಗಿರುವುದು ಮತ್ತು ಅಲ್ಲಿನ ಚರಿತ್ರೆಯನ್ನು ಪ್ರವಾಸಿಗರಿಗೆ ಈಗಲೂ ತೋರಿಸುತ್ತಿರುವುದು ರೋಚಕವಾಗಿದೆ. ಹಳೆಯ ಕಾಲವನ್ನು ಈಗಿನವರಿಗೆ ಆಸಕ್ತಿದಾಯಕವಾಗುವಂತೆ ಪ್ರಸ್ತುತಪಡಿಸುವ ಕಲೆ ಅಮೆರಿಕನ್ನರಿಗೆ ಕರಗತವಾಗಿದೆ.

—ಎಸ್.ಕೆ. ಗೋಪಾಲಕೃಷ್ಣ ಭಟ್, ಮಂಗಳೂರು



### ಜೀವಂತ ಇತಿಹಾಸ!

ಫೋರ್ಟ್ ವರ್ತ್ ಕುರಿತ ವಿವರಣೆ ಸೊಗಸಾಗಿದ್ದು, ನಾವೂ ಲೇಖಕಿಯ ಜೊತೆ ಪಯಣಿಸಿದಂತಾಯಿತು. ದೊಡ್ಡ ಕೊಂಬಿನ ಎತ್ತುಗಳು ಅಚ್ಚರಿ ಹುಟ್ಟಿಸಿದವು. ಕಾಲಕಳೆದಂತೆ ಒಂದು ನಗರ ಹೇಗೆ ಬದಲಾಗುತ್ತಾ ಹೋಗುತ್ತದೆ ಅನ್ನೋದು ಕುತೂಹಲಕರ. ಹಳೆಯ ವೈಭವವನ್ನು ನೆನಪಿಸುವಂತೆ ಪ್ರವಾಸಿಗಳಿಗೂ ಅದರ ಅನುಭವ ಪಡೆಯುವಂತೆ ಪರೇಡ್, ಶೋಗಳನ್ನು ನಡೆಸುತ್ತ ಇತಿಹಾಸವನ್ನು ಜೀವಂತವಾಗಿಟ್ಟಿರುವುದು ವಿಶೇಷ.

—ವೀಣಾ ಅನಂತ್

### ಲೋಹಿಯಾ ಜೀವನದರ್ಶನ

'ಡಾಕ್ಟರ್ ಸಾಹೇಬ್' ಧಾರಾವಾಹಿಯನ್ನು ಮೊದಲ ಸಂಚಿಕೆಯಿಂದಲೂ ತೆರೆದ ಕಣ್ಣು, ಮನಗಳ ಮೂಲಕ ಓದಿ ಸವಿಯುತ್ತಿರುವ ನನಗೆ ಈ ವಾರದ ಸಂಚಿಕೆಯಲ್ಲಿ (ಜು. 18) ಲೋಹಿಯಾರ ಸ್ತ್ರೀ ಪರ ವಿಶ್ಲೇಷಣೆಯನ್ನು ಓದಿ ಅವರ ಜೀವನದರ್ಶನವನ್ನು ಮತ್ತಷ್ಟು ನಿಚ್ಚಳವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಯಿತು. ಪೂರ್ವಗ್ರಹಪೀಡಿತರಾಗದೆ ವಸ್ತುನಿಷ್ಠೆಗೆ



ಬದ್ಧರಾಗಿ ಕನ್ನಡಿಗರಿಗೆ ಲೋಹಿಯಾರ ಸಾಮಾಜಿಕ ಹಾಗೂ ರಾಜಕೀಯ ಕೊಡುಗೆಯ ಕುರಿತ ಅಪರೂಪದ ಮಾಹಿತಿ ನೀಡುತ್ತಿರುವ ನಟರಾಜ್ ಹುಳಿಯಾರ್ ಅವರಿಗೆ ಧನ್ಯವಾದಗಳು.

—ಎಸ್.ಎನ್. ಸುಶೀಲ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in